ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಮೂನಾರಿನ ಬಣ್ಣದ ಕಪ್ಪೆಗಳು ಮತ್ತು ಹಸಿರುಹಾವು

ಕಪ್ಪೆಗಳ ಹತ್ತಿರ ಹೋಗಿ ಅವುಗಳ ವೈಶಿಷ್ಟ್ಯತೆ ಗಮನಿಸಿದರೆ ಈ ಪ್ರಕೃತಿಯ ಅಮೋಘ ಸೃಷ್ಟಿಗಳಲ್ಲಿ ಇವೂ ಒಂದೆಂಬುದು ಮನವರಿಕೆಯಾಗುತ್ತದೆ. ನೀವೂ ಊಹಿಸದ ಬಣ್ಣದ ಕಪ್ಪೆಗಳು ಮೂನಾರ್ ಬೆಟ್ಟದಲ್ಲಿವೆ. ಒಂದೊಂದರ ಕಥೆಯೂ ಅಷ್ಟೇ ವರ್ಣರಂಜಿತ.

ನಾವು ಮೂನಾರ್ ತಲುಪಿದಾಗ ಸಣ್ಣಗೆ ಮಳೆಯಾಗುತ್ತಲೇ ಇತ್ತು. ಇಲ್ಲಿ ನಾವು ವಿಶೇಷವಾದ ಬಣ್ಣಬಣ್ಣದ ಕಪ್ಪೆಗಳನ್ನು ಹುಡುಕುವುದಿತ್ತು. ಹುಲಿ, ಚಿರತೆ, ಹಕ್ಕಿಗಳ ಚಿತ್ರ-ಬೇಟೆಯ ನಂತರ ಮಳೆಗಾಲ ಶುರುವಾದರೆ ನಮಗೆ ಸಿಕ್ಕುವ ಶುಭಶಕುನಗಳು ಇವೇನೆ. ಕಪ್ಪೆಗಳ ಪ್ರಪಂಚ ತುಂಬಾ ವಿಸ್ಮಯಕಾರಿ. ಕುತೂಹಲದ ಹಲವಾರು ಸಂಗತಿಗಳು ಈ ಲೋಕದಲ್ಲಿ ಸಂಚರಿಸಿದರೆ ಸಿಗುತ್ತವೆ. ಈ ಸೃಷ್ಟಿಯಲ್ಲಿ ಜಿಗಿಯುವ, ಓಡುವ, ಈಜುವ, ಬಿಲ ತೋಡುವ, ಮರ ಹತ್ತುವ, ಗಾಳಿಯಲ್ಲಿ ತೇಲುವ, ಮಣ್ಣಿನ ಗೂಡು ಕಟ್ಟುವ, ನೀರು ಆಹಾರವಿಲ್ಲದೆಯೂ ಅನೇಕ ತಿಂಗಳು ಬದುಕುವ ಶಕ್ತಿ ಸಾಮರ್ಥ್ಯಗಳಿರುವ ಜೀವವೇ ಕಪ್ಪೆ.

ಪಟದ ತಲುಬಿನ ಜನ ಕೊನೇ ಪಕ್ಷ ಕಪ್ಪೆಗಳನ್ನಾದರೂ ನೆಮ್ಮದಿಯಿಂದ ಇರಲು ಬಿಡುವುದಿಲ್ಲವಲ್ಲ ಎಂದು ಹಲವರು ಗೊಣಗಬಹುದು. ಚಿಟಪಟ ಕೆಸರಲ್ಲಿ ಗಬ್ಬೆಡ ಎಬ್ಬಿಸಿಕೊಂಡು, ತುಂತುರು ಮಳೆಯಲ್ಲಿ ನೆನೆದು ರಾಡಿಯಾಗಿ, ಬಿದ್ದೆದ್ದು ಮುಖ ಮುಸುಡಿ ಕೆತ್ತಿಕೊಳ್ಳುವ ರುದ್ರ ಭಯಾನಕ ಕಪ್ಪೆ ಹುಡುಕಾಟದ ಸಾಹಸ ಹುಡುಗಾಟವಲ್ಲ. ಉಳಿದ ಫೋಟೊಗ್ರಫಿಯ ತರಹ ಇದು ಸಲೀಸಲ್ಲ. ಅಪಾಯದ ಪ್ರಮಾಣ ಕೊಂಚ ಜಾಸ್ತಿ. ತುಂಬಾ ತಯಾರಿ ನಡೆಸಬೇಕು. ಮಾಹಿತಿ ಸಂಗ್ರಹಿಸಬೇಕು. ಹೆಚ್ಚು ಮುಂಜಾಗ್ರತೆ ಕ್ಯಾಮೆರಾ ಮತ್ತು ಡಿಫ್ಯೂಸರ್ ಲೈಟಿನ ಪ್ರಾಣ ಕಾಪಾಡಿಕೊಳ್ಳುವ ಕಡೆಗಿರಬೇಕು.

ನಿರಂತರ ಮಳೆಯಲ್ಲಿ, ಜಾರುವ, ತೆವಳುವ ರಾತ್ರಿಯ ಕಾಡ ನಡಿಗೆಯಲ್ಲಿ ಏನೂ ಆಗಬಹುದು. ಸರಳ ಭಂಡ ಧೈರ್ಯ ಇದ್ದರಷ್ಟೇ ಇವೆಲ್ಲಾ ಮಾಡಲು ಮುಂದಾಗಬೇಕು. ಮೂನಾರ್ ಕಾಡು ಹೊಕ್ಕಾಗ ನಾವು ಊಹಿಸಿದ್ದಕ್ಕಿಂತ ಹೆಚ್ಚಿನ ಹೊಸ ಜೀವ ವೈವಿಧ್ಯದ ವಿಸ್ಮಯಗಳನ್ನು ನೋಡಿದೆವು. ಸಾಕಷ್ಟು ಹೊಸ ವಿಷಯ ಕಲಿತೆವು. ವಿಚಿತ್ರ ಎಂದರೆ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ವಾಸಿಸುವ ಕಪ್ಪೆ ಮತ್ತೆ ಮುಂದೆ ಎಲ್ಲಿ ಹೋಗಿ ಹುಡುಕಿದರೂ ಸಿಗುವುದಿಲ್ಲವಂತೆ. ತಮ್ಮ ಇರುವಿಕೆಯನ್ನು ಇವು ವಾತಾವರಣಕ್ಕೆ ಅನುಗುಣವಾಗಿ ರೂಪಿಸಿಕೊಂಡಿರುತ್ತವೆ. ಪ್ರಕೃತಿ ಸಾವಿರಾರು ವರ್ಷಗಳ ಮೊದಲೇ ಇವುಗಳಿಗೆ ಈ ಹಂಚಿಕೆ ಮಾಡಿಬಿಟ್ಟದೆ. ನಿಸರ್ಗ ವಿಧಿಸಿರುವ ಈ ನಿಯಮವನ್ನು ಈ ಜೀವಿಗಳು ಮೀರಲು ಹೋಗುವುದೇ ಇಲ್ಲ. ಇಂತಹ ತಲೆ ಹರಟೆ ಕಾರ್ಯಕ್ರಮ ಏನಿದ್ದರೂ ಮನುಷ್ಯನಿಗಷ್ಟೇ ಮೀಸಲು. ಇಲ್ಲಿನ ಬೆಟ್ಟಗಳ ಎತ್ತರಕ್ಕೆ ನಡೆದು ಹೋದಂತೆಲ್ಲಾ ಮರ, ಗಿಡ, ಬಳ್ಳಿ, ಹೂಗಳ ಪ್ರಜಾತಿ ನಿಧಾನಕ್ಕೆ ಬದಲಾಗುವುದನ್ನು ಗಮನಿಸಬಹುದು. ಹವಾಮಾನವೂ